**ಕರ್ನಾಟಕ ಸರ್ಕಾರ**

**5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ದೇವನಹಳ್ಳಿ**

**ಎಸ್.ಸಿ ನಂ. 15060/2022**

| | | |
|---|---|---|
| ಹೆಸರು | ಃ | ಸೊಣ್ಣೇಗೌಡ ಅಲಿಯಾಸ್ ಸುಬ್ರಮಣಿ |
| ತಂದೆ ಹೆಸರು | ಃ | ಚನ್ನರಾಯಪ್ಪ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ | ಃ | ಮಜ್ಜಿಗೆ ಹೊಸಹಳ್ಳಿ |

**PW-3, CW-3**

(ಇಂದು ದಿನಾಂಕ 18.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು)

**ಮುಖ್ಯ ವಿಚಾರಣೆ ಃ ಅಭಿಯೋಜನೆ ಪರ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ**

ಚಾಸಾ.1 ಮತ್ತು 2 ಗೊತ್ತು. ಈಗ ನೋಡುತ್ತಿರುವ ನಿ.ಪಿ.2 ರ ಮೇಲೆ ನನ್ನ ಸಹಿ ಇರುತ್ತದೆ. ಅದನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ಸುಮಾರು 5-6 ವರ್ಷಗಳ ಹಿಂದೆ ಪೊಲೀಸ್ ಠಾಣೆಗೆ ಹೋದಾಗ ನಿ.ಪಿ.2 ಕ್ಕೆ ಸಹಿ ಮಾಡಿರುತ್ತೇನೆ. ಜಮೀನು ವಿಚಾರಕ್ಕೆ ಪೊಲೀಸ್ ಠಾಣೆಗೆ ಹೋಗಿದ್ದೆ. ನಿ.ಪಿ.2 ರಲ್ಲಿ ಏನು ಬರೆದಿರುತ್ತಾರೆ ಅನ್ನುವುದು ಗೊತ್ತಿಲ್ಲ. ಈಗ ನೋಡುತ್ತಿರುವ ನಿ.ಪಿ.3 ರಲ್ಲಿ ನಾನು ಇರುತ್ತೇನೆ. ಅದನ್ನು ವಿಶ್ವನಾಥಪುರ ಪೊಲೀಸ್ ಠಾಣೆಯ ರಸ್ತೆಯಲ್ಲಿ ತೆಗೆದಿರುತ್ತಾರೆ. ನಿ.ಪಿ.4 ರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿ.ಪಿ.4(ಸಿ) ಎಂದು ಗುರುತಿಸಲಾಯಿತು. ಸುಮಾರು 5-6 ವರ್ಷಗಳ ಹಿಂದೆ ಪೊಲೀಸ್ ಠಾಣೆಗೆ ಹೋದಾಗ ನಿ.ಪಿ.4 ಕ್ಕೆ ಸಹಿ ಮಾಡಿರುತ್ತೇನೆ. ಜಮೀನು ವಿಚಾರಕ್ಕೆ ಪೊಲೀಸ್ ಠಾಣೆಗೆ ಹೋಗಿದ್ದೆ. ನಿ.ಪಿ.4 ರಲ್ಲಿ ಏನು ಬರೆದಿರುತ್ತಾರೆ ಅನ್ನುವುದು ಗೊತ್ತಿಲ್ಲ. ಈಗ ನೋಡುತ್ತಿರುವ ನಿ.ಪಿ.5 ರಲ್ಲಿ ನಾನು ಇರುತ್ತೇನೆ. ಅದನ್ನು ವಿಶ್ವನಾಥಪುರ ಪೊಲೀಸ್ ಠಾಣೆಯ ರಸ್ತೆಯಲ್ಲಿ ತೆಗೆದಿರುತ್ತಾರೆ.

(ಈ ಸಂದರ್ಭದಲ್ಲಿ ಮಾನ್ಯ ಪಿ.ಪಿ.ಯವರ ವಿನಂತಿ ಮೇರೆಗೆ ಕಡತವನ್ನು ಹಾಗೂ ಸಾಕ್ಷ್ಯವನ್ನು ಪರಿಗಣಿಸಿ, ಈ ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲವೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲು : ಮಾನ್ಯ ಪಿ.ಪಿ. ಯವರಿಂದ :**

ದಿನಾಂಕ 13.12.2020 ರಂದು ನನ್ನನ್ನು ಪೊಲೀಸರು ದೇವನಹಳ್ಳಿ ದೊಡ್ಡಬಳ್ಳಾಪುರ ರಸ್ತೆ ಶೆಟ್ಟಿ ಹಳ್ಳಿ ಗ್ರಾಮದ ನಾಗರಾಜ್ ಅವರ ಕಾಂಪ್ಲೆಕ್ಸ್ ಮುಂಭಾಗದ ರಸ್ತೆಯ ಬಳಿ ಕರೆಸಿದ್ದು, ಅಲ್ಲಿ ಚಾಸಾ.1 ಹಾಜರಿದ್ದು, ಸದರಿ ಸ್ಥಳದಲ್ಲಿ ತನ್ನನ್ನು ಅಪಹರಣ ಮಾಡಿ ನನ್ನಿಂದ ರೂ.10 ಸಾವಿರ ಹಣವನ್ನು ದೋಚಿಕೊಂಡು ಅಲ್ಲಿಂದ ನನ್ನನ್ನು ಅಪಹರಣ ಮಾಡಿಕೊಂಡು ಹೋಗಿ ರೂ.10 ಲಕ್ಷ ಹಣ ತರುವಂತೆ ಬೆದರಿಕೆ ಹಾಕಿ ಒಂದು ವೇಳೆ ಹಣ ತರದಿದ್ದರೆ ನಿನ್ನನ್ನು ಮತ್ತು ಹೆಂಡತಿ ಮಕ್ಕಳನ್ನು ಸಾಯಿಸುವುದಾಗಿ ಬೆದರಿಕೆ ಹಾಕಿದ ಸ್ಥಳ ಇದೇ ಎಂದು ತೋರಿಸಿದ ಮೇರೆಗೆ ಪೊಲೀಸರು ನನ್ನ ಸಮಕ್ಷಮ ನಿ.ಪಿ.2 ರಂತೆ ಬೆಳಗ್ಗೆ 9.00 ರಿಂದ 9.45 ಗಂಟೆಯವರೆಗೆ ಪಂಚನಾಮೆ ಬರೆದುಕೊಂಡಿರುತ್ತಾರೆ ಅನ್ನುವುದು ಸರಿಯಲ್ಲ. ಆ ಸಮಯದಲ್ಲಿ ನಿ.ಪಿ.3 ರಂತೆ ಫೋಟೋ ತೆಗೆದಿರುತ್ತಾರೆ ಅನ್ನುವುದು ಸರಿಯಲ್ಲ. ಅದೇ ರೀತಿ ಅದೇ ದಿನ ಪೊಲೀಸರು ನನ್ನನ್ನು ಐವಿಸಿ ರಸ್ತೆ ತಿಂಡ್ಲು ಗೇಟ್ ಬಳಿ ಇರುವ ಜಾಲಿಗೆ ಅರುಣ್ ಅವರ ಹೂವಿನ ಗಿಡದ ಜಮೀನಿನ ಮುಂಭಾಗದ ರಸ್ತೆಯ ಬಳಿ ಕರೆದು ಅಲ್ಲಿ ಚಾಸಾ.1 ಹಾಜರಿದ್ದು, ಸದರಿ ಸ್ಥಳದಲ್ಲಿ ಆರೋಪಿತರು ತನ್ನನ್ನು ಹಣಕ್ಕಾಗಿ ಅಪಹರಣ ಮಾಡಿ ಮತ್ತೆ ವಾಪಸ್ಸು ತಂದು ಅದೇ ಸ್ಥಳದಲ್ಲಿ ಬಿಟ್ಟಿರುತ್ತಾರೆ ಎಂದು ತೋರಿಸಿದ ಮೇರೆಗೆ ಪೊಲೀಸರು ನನ್ನ ಸಮಕ್ಷಮ ಬೆಳಗ್ಗೆ 10.45 ರಿಂದ 11.45 ರವರೆಗೆ ನಿ.ಪಿ.4 ರಂತೆ ಪಂಚನಾಮೆ ಬರೆದುಕೊಂಡಿರುತ್ತಾರೆ ಅನ್ನುವುದು ಸರಿಯಲ್ಲ. ಆ ಸಮಯದಲ್ಲಿ ನಿ.ಪಿ.5 ರಂತೆ ಸ್ಥಳದಲ್ಲಿ ಫೋಟೋ ತೆಗೆದಿರುತ್ತಾರೆ ಅನ್ನುವುದು ಸರಿಯಲ್ಲ. ನಿ.ಪಿ.2 ರಿಂದ 5 ರಲ್ಲಿಯ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

**ಪಾಟೀ ಸವಾಲು : ಆರೋಪಿತರ ಪರ ಶ್ರೀ ಎಸ್ಎಂ ವಕೀಲರಿಂದ:** ಇಲ್ಲ

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ವಿಚಾರಿಸಿ, ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇ.

V AD& SJ, B,luru (R)
Devanahalli